ದಿನಾಂಕಃ 25.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಟಿ.ಡಿ., ವಕೀಲರಿಂದ 1 ನೇ ಆರೋಪಿ ಪರವಾಗಿ

19. ದಿಃ 10.01.2017 ರಂದು ನಾನು ತನಿಖಾಧಿಕಾರಿ ಮುಂದೆ ತರೀಕೆರೆ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಹೇಳಿಕೆ ನೀಡಿದ್ದೇನೆ. ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಗೂ ಲಿಂಗದಹಳ್ಳಿ ವಸತಿಗೃಹಕ್ಕೆ 600 ಮೀಟರ ದೂರ ಇದೆ. ಚಾಸಾ.1 ರವರಿಗೆ ಮಾಹಿತಿ ಬಂದಿತ್ತು. ಆಗ ನಾನು ಲಿಂಗದಹಳ್ಳಿ ವಸತಿ ಗೃಹದಲ್ಲಿದ್ದೆ. ನಮ್ಮ ವಸತಿ ಗೃಹದ ಎದುರುಗಡೆ ಲಿಂಗದಹಳ್ಳಿ ಪೋಲೀಸ್ ಠಾಣೆ ಇದೆ. ಅಲ್ಲಿಂದ 200 ಮೀಟರ್ ದೂರದಲ್ಲಿ ಚಿಕ್ಕಮಗಳೂರು-ತರೀಕೆರೆ ರಸ್ತೆ ಇದೆ. ಈ ಪ್ರಕರಣ ದಾಖಲಾಗುವ ಸಮಯದಲ್ಲಿ ಚಿಕ್ಕಮಗಳೂರು-ತರೀಕೆರೆ ರಸ್ತೆಯಲ್ಲಿ ಚೆಕ್ ಪೋಸ್ಟ್ ಇರಲಿಲ್ಲ.

20. ಮಾಹಿತಿ ಬಂದ ತಕ್ಷಣ ನಾವು ನಾಕಬಂದಿ ಹಾಕಿ ವಾಹನ ತಪಾಸಣೆ ಮಾಡಿರುವುದಿಲ್ಲ. ತರೀಕೆರೆ ಮತ್ತು ಲಿಂಗದಹಳ್ಳಿ ರಸ್ತೆ ಒಂದು ಸಾಕಷ್ಟು ಜನ ಹಾಗೂ ವಾಹನ ಓಡಾಡುವ ರಸ್ತೆಯಾಗಿದೆ. ಅಂದು ನಾವು ಬೇರೆ ಯಾವುದೇ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುವುದಿಲ್ಲ. ಲಿಂಗದಹಳ್ಳಿ ಪೆಟ್ರೋಲ್ ಬಂಕ್ ನಿಂದ ಕೋಡಿಕ್ಯಾಂಪ್ ಸುಮಾರು 13 ಕಿಮೀ ದೂರ ಇದೆ. ಪೆಟ್ರೋಲ್ ಬಂಕ್ ನಿಂದ ಕೋಡಿಕ್ಯಾಂಪ್ ಗೆ 20 ನಿಮಿಷದಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗಬಹುದು.

21. ಕೋಡಿಕ್ಯಾಂಪ್ 4 ನೇ ಕ್ರಾಸಿನಲ್ಲಿ ಸಾಕಷ್ಟು ವಾಹನಗಳನ್ನು ನಿಲ್ಲಿಸಲಾಗಿತ್ತು. ತನಿಖಾಧಿಕಾರಿಗಳ ಮುಂದೆ ನಾನು 4 ನೇ ಆರೋಪಿ ಪತ್ತೆಗಾಗಿ ಅವರು ವಾಸವಿರುವ ಮನೆಗೆ ಹೋಗಿ ನೋಡಲಾಗಿ ಅವರು ಮನೆಗೆ ಬೀಗ ಹಾಕಿ ಓಡಿ ಹೋಗಿರುತ್ತಾರೆ ಎಂದು ಹೇಳಿಕೆ ನೀಡಿದ್ದೇನೆ. ನಾವು ಮನೆಯ ಹತ್ತಿರ ಹೋಗುವಾಗ ಬೀಗ ಹಾಕಿದ್ದು ನಾವು ಅಲ್ಲಿಂದ ಹೊರಡುವವರೆಗೂ ಬೀಗ ತೆಗೆದಿರಲಿಲ್ಲ.

ಕೋಡಿಕ್ಯಾಂಪ್ 4 ನೇ ರಸ್ತೆಯಲ್ಲಿ ಫಾರೆಸ್ಟ್ ಗಾರ್ಡ್ ಒಬ್ಬರು ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

22. ಪೊಟೋಗ್ರಾಪರನ್ನು ಕರೆ ಮಾಡಿ ಚಾಸಾ.1 ರವರು ಕರೆಸಿದ್ದೆವು. ನಡೆದ ಘಟನೆಯನ್ನು ರೂಪಶ್ರೀ ಸ್ಟುಡಿಯೋ ಮಾಲೀಕರಾದ ನಾಗರಾಜ ಇವರನ್ನು ದೂರವಾಣಿ ಮೂಲಕ ಸಂಪರ್ಡಿಸಿ ಸ್ಥಳಕ್ಕೆ ಕರೆಸಿ ಸದರಿ ಘಟನೆ ಬಗ್ಗೆ ವಿಡಿಯೋ ಚಿತ್ರೀಕರಣ ನಡೆಸಿ ಪೋಟೋ ತೆಗಯಲಾಯಿತು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ನಮ್ಮ ಸಿಬ್ಬಂದಿ ರಿಯಾಜ್ ನೆಲಮಾಳಿಗೆಗೆ ಇಳಿದು ಮುದ್ದೆಮಾಲುಗಳನ್ನು ತೆಗೆದುಕೊಟ್ಟರು ಎಂದು ಮುದ್ದೆ ಮಾಲುಗಲ್ಲಿ ನಮುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ತೂಡ ಮಾಡಿ ನಂಬರು ನೀಡಿರವರು ಯಾವುದೇ ಹೇಳಲು ಆಗುವುದಿಲ್ಲ. ನಾವು ಒಟ್ಟು 9 ಜನ ಸಿಬ್ಬಂದಿ ಅಲ್ಲಿದ್ದೆವು. ಪಂಚನಾಮೆಯನ್ನು ಸಂತೋಷ ತಳವಾರ ಬರೆದರು. ಚಾಸಾ.1 ರವರು ಪಂಚನಾಮೆ ಬರೆಯಲು ಮಾಹಿತಿ ನೀಡಿದರು. ಆರೋಪಿತರ ಹೇಳಿಕೆ ಯನ್ನು ಬರವಣಿಗೆಯಲ್ಲಿ ನನ್ನ ಸಮಕ್ಷಮ ದಾಖಲಿಸಿಲ್ಲ.

23. ದಿಃ 14.12.2016 ರಂದು ನಾನು, ಚಾಸಾ.1 ಮತ್ತು ಚಾಸಾ.3 ರವರು ಸೇರಿ ಖಚಿತ ವರ್ತಮಾನದ ಮೇರೆಗೆ ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಕಾಯುತ್ತಿದ್ದೆವು, ಆ ದಿನ ಮದ್ಯಾಹ್ನ 1.00 ಗಂಟೆ ಸಮಯಕ್ಕೆ ಚಿಕ್ಕಮಗಳೂರು ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿರು ವುದನ್ನು ಕಂಡು ನಾವು ನಿಲ್ಲಿಸುವ ಪ್ರಯತ್ನ ಮಾಡಿದೆವು, ಆ ದ್ವಿಚಕ್ರ ವಾಹನದಲ್ಲಿ ಒಬ್ಬ ಚಾಲಕ ಹಿಂಬದಿ ಸವಾರ ಇದ್ದು ನಮ್ಮ ಸೂಚನೆಯನ್ನು ಲೆಕ್ಕಿಸದೆ ತರೀಕೆರೆ ಹೊರಟುಹೋದರು, ಸದರಿ ದ್ವಿಚಕ್ರ ವಾಹನದ ಮದ್ಯೆ ಒಂದು ಬಿಳಿ ಬಣ್ಣದ ಚೀಲ ಕಂಡುಬಂದಿತು, ಸದರಿ ದ್ವಿಚಕ್ರ ವಾಹನದ ನಂಬರು ಕೆಎ-18/ಇಸಿ-3711 ಆಗಿತ್ತು, ನಾವು ಇಲಾಖೆಯ ಜೀಪಿನಲ್ಲಿ ಮೇಲೆ ಹೇಳಿದ ಸದರಿ ದ್ವಿಚಕ್ರ ವಾಹನವನ್ನು ಬೆನ್ನಟ್ಟಿ ತರೀಕೆರೆ ತಾಲ್ಲೂಕಿನ ಕೋಡಿಕ್ಯಾಂಪ್ ಬೋವಿ ಕಾಲೋನಿ ನಾಲ್ಕನೇ ಕ್ರಾಸ್ ಹತ್ತಿರದ ಒಂದು ಮನೆಯ ಹತ್ತಿರ ನಾವು ಬೆನ್ನಟ್ಟಿದ ದ್ವಿಚಕ್ರವಾಹನ ನಿಂತಿತ್ತು, ನಾವು ಪರಿಶೀಲನೆಗೆ ಮುಂದಾದಾಗ ನಮ್ಮನ್ನು ನೋಡಿ ಇಬ್ಬರು ವ್ಯಕ್ತಿಗಳು

ಅಲ್ಲಿಂದ ಓಡಿಹೋದರು, ನಾವು ಅವರನ್ನು ಬೆನ್ನಟ್ಟಿ ಹಿಡಿದುಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ಅವರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಮಂಜು ಮತ್ತು ಮುರುಗೇಶ್ ಇಬ್ಬರು ಹಳೇಗಂಗೂರು ನಿವಾಸಿಗಳು ಎಂದು ತಿಳಿಸಿದರು, ನಾವು ದ್ವಿಚಕ್ರ ವಾಹನದಲ್ಲಿ ಬ್ಯಾಗಿನಲ್ಲಿ ಏನು ತಂದಿದ್ದೀರ ಎಂದು ಕೇಳಿದಾಗ ಅವರು ಗಂಗೂರು ಮೀಸಲು ಅರಣ್ಯದಿಂದ ಶ್ರೀಗಂಧದ ಮರ ಕಡಿದು ತುಂಡುಗಳನ್ನಾಗಿ ಮಾಡಿ 1 ಮತ್ತು 4 ನೇ ಆರೋಪಿತರಿಗೆ ಮಾರಾಟ ಮಾಡುತ್ತಿರು ವುದಾಗಿ ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. ನಾವು ಹಿಡಿದ 2 ಮತ್ತು 3 ನೇ ಆರೋಪಿತರನ್ನು 1 ಮತ್ತು 4 ನೇ ಆರೋಪಿತರ ಮನೆಯ ಬಳಿ ಕರೆತಂದು ನೋಡಿದಾಗ ಆ ಮನೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು, ವಿಚಾರಿಸಿದಾಗ ನಾವು 2 ಮತ್ತು 3 ನೇ ಆರೋಪಿತರನ್ನು ಹಿಡಿಯುವಾಗ 1 ಮತ್ತು 4 ನೇ ಆರೋಪಿತರು ಮನೆಗೆ ಬೀಗ ಹಾಕಿಕೊಂಡು ಓಡಿಹೋಗಿರುವ ವಿಚಾರ ತಿಳಿಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

26. ನಂತರ ಈ ವಿಚಾರವನ್ನು ಚಾಸಾ.14 ರವರಿಗೆ ಚಾಸಾ.1 ರವರು ತಿಳಿಸಿದರು, ಚಾಸಾ.14 ರವರು ಚಾಸಾ.6 ರವರ ಮೂಲಕ ಶೋಧನಾ ಪತ್ರವನ್ನು ಕಳುಹಿಸಿದರು, ಚಾಸಾ.4 ರಿಂದ 9 ರವರನ್ನು ಸ್ಥಳದ ಬಂದೋಬಸ್ತಿಗಾಗಿ ಕಳುಹಿಸಿದರು, ನಾವು ಮನೆಯನ್ನು ಸುತ್ತುವರಿದು ಪರಿಶೀಲಿಸಿದಾಗ ಮನೆಯ ಹಿಂದಿನ ಬಾಗಿಲನ್ನು ಭದ್ರಪಡಿಸದೇ ಇರುವುದು ಕಂಡುಬಂತು, ನಾವು ಸದರಿ ಮನೆಯೊಳಗೆ ಪ್ರವೇಶ ಮಾಡಿ ನೋಡಿದಾಗ ಮನೆಯ ಒಂದು ಬೆಡ್ ರೂಮಿಗೆ ಅಳವಡಿಸಿದ ಮರದ ಅಲೆಮಿರಾದಲ್ಲಿ ಬಟ್ಟೆಗಳ ಕೆಳಗಡೆ ಹಲಗೆ ಜೋಡಿಸಿರುವುದು ಕಂಡು ಬಂತು, ಪರಿಶೀಲಿಸಿದಾಗ ಒಂದು ಕಿಂಡಿ ಇದ್ದು, ಕಿಂಡಿಯಿಂದ ಶ್ರೀಗಂಧದ ಪರಿಮಳ ಬರುತ್ತಿತ್ತು, ಪುನಃ ಪರಿಶೀಲಿಸಿದಾಗ ಅಲ್ಮೆರಾದ ಪಕ್ಕದಲ್ಲಿ ದೇವರ ಕೋಣೆ ಇದ್ದುದು

ಕಂಡುಬಂತು, ಪೂಜಾ ರೂಮಿನ ನೆಲದ ಗ್ರಾನೈಟ್ ಪೊಳ್ಳಾಗಿರುವುದು ಕಂಡುಬಂತು. ಅಲ್ಲಿ ಮತ್ತೊಮ್ಮೆ ಪರಿಶೀಲಿಸಿದಾಗ ಅಲ್ಲೊಂದು ತೊಟ್ಟಿ ಇದ್ದು, ತೊಟ್ಟಿಯಲ್ಲಿ ಶ್ರೀಗಂಧದ ತುಂಡುಗಳು ಮತ್ತು ಕೈಚೀಲಗಳು ಇರುವುದು ಕಂಡುಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27. ನಾವು ಚಾಸಾ.9 ರವರನ್ನು ತೊಟ್ಟಿಯೊಳಗೆ ಇಳಿಸಿ ನೋಡಲಾಗಿ ಅದರಲ್ಲಿ ಶ್ರೀಗಂಧದ ಪುಡಿ ಒಂದು ಚೀಲದಲ್ಲಿ ಇದ್ದು, ಶ್ರೀಗಂಧದ ಚಕ್ಕೆಗಳು, ಚಿಪ್ಪುಹಂದಿಯ ಚಿಪ್ಪು ಇತ್ತು, ತೊಟ್ಟಿಯ ಆಳ ಅಂದಾಜು 4 ರಿಂದ 5 ಅಡಿ ಇತ್ತು. ಶ್ರೀಗಂಧದ ಪುಡಿ, ಶ್ರೀಗಂಧದ ಚಕ್ಕೆಗಳು ಹಾಗೂ ಚಿಪ್ಪುಹಂದಿಯ ಚಿಪ್ಪುಗಳನ್ನು ಅಮಾನತು ಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28. ಮೇಲೆ ಹೇಳಿದ ಸ್ವತ್ತುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ಪರಿಗಣಿಸಿ ವಲಯ ಕಚೇರಿಗೆ ಕರೆ ಮಾಡಿ ಎಫ್.ಓ.ಸಿ ನಂಬರು 22/2016-17 ದಿ: 14.12.2016 ನ್ನು ಪಡೆದುಕೊಂಡೆವು, ಈ ಬಗ್ಗೆ ಪ್ರವವರದಿಯನ್ನು ಚಾಸಾ.1 ರವರು ತಯಾರಿಸಿದರು, ಸ್ಥಳದಲ್ಲಿ ಪಂಚನಾಮೆ ಕ್ರಮ ಕೂಡ ಜರುಗಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29. ಮಹಜರು ಕಾಲದಲ್ಲಿ ವಶಪಡಿಸಿಕೊಂಡು ಗಂಧದ ತುಂಡುಗಳು ಹಾಗೂ ಪುಡಿ ಸೇರಿ ಒಟ್ಟು 66 ಕೆಜಿ ಇತ್ತು, ಚಿಪ್ಪುಹಂದಿಯ ಚಿಪ್ಪುಗಳು ಒಟ್ಟು 5.600 ಗ್ರಾಂ ಇತ್ತು, ಹೊರಗಡೆ ದ್ವಿಚಕ್ರವಾಹನದಲ್ಲಿದ್ದ ಚೀಲದ ಮತ್ತು ಮನೆಯ ಒಳಗಡೆ ಇದ್ದ ಶ್ರೀಗಂಧದ ಒಟ್ಟು ತೂಕ ಮೇಲೆ ಹೇಳಿದಂತಿತ್ತು, ಸದರಿ ಮಹಜರು ನನ್ನ ಹಸ್ತಾಕ್ಷರದಲ್ಲಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

30. ಎರಡನೇ ಮತ್ತು ಮೂರನೇ ಆರೋಪಿತರು ಮೇಲೆ ಹೇಳಿದ ಸ್ವತ್ತುಗಳನ್ನು ತಾವೇ ತಂದು ಪೂರೈಸಿರುವುದಾಗಿ ಒಪ್ಪಿಕೊಂಡು

ಗುರುತಿಸಿರುತ್ತಾರೆ, ನಾವು ಅಮಾನತುಪಡಿಸಿಕೊಂಡ ಶ್ರೀಗಂಧದ ತುಂಡುಗಳು ಹಾಗೂ ಪುಡಿ ಒಟ್ಟು ಐದು ಚೀಲಗಳಲ್ಲಿ ಇದ್ದವು, ಚಿಪ್ಪುಹಂದಿಯ ಚಿಪ್ಪುಗಳು ಪ್ಲಾಸ್ಟಿಕ್ ಚೀಲದಲ್ಲಿ ಇದ್ದವು, ಮಹಜರನ್ನು ಸಂಜೆ 4.00 ರಿಂದ ಸಂಜೆ 7.00 ರವರೆಗೆ ನಿಪಿ.2 ಪಂಚನಾಮೆ ಕ್ರಮ ಜರುಗಿಸಿದ್ದೆವು, ಸ್ಥಳೀಕರು ಪಂಚನಾಮೆ ಕಾಲದಲ್ಲಿ ಸಹಕರಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31. ಚಾಸಾ.3 ರವರನ್ನು ಮಹಜರು ಮಾಡುವ ಕಾಲದಲ್ಲಿ ವಿಡಿಯೋ ಚಿತ್ರೀಕರಣ ಮಾಡಿ ಭಾವಚಿತ್ರ ಸಂಗ್ರಹಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. 2 ಮತ್ತು 3 ನೇ ಆರೋಪಿತರು ಹಾಗೂ ವಶಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ತರೀಕೆರೆ ವಲಯ ಕಚೇರಿಗೆ ಹಾಜರಾಗಿ ಚಾಸಾ.14 ರವರ ಮುಂದೆ ಹಾಜರುಪಡಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33. ದಿಃ 10.01.2017 ರಂದು 2 ಮತ್ತು 3 ನೇ ಆರೋಪಿತರನ್ನು ಚಾಸಾ.14 ರವರು ನ್ಯಾಯಾಲಯದ ಅನುಮತಿ ಪಡೆದು ವಶಕ್ಕೆ ಪಡೆದುಕೊಂಡರು, ನಂತರ ನಾನು, ಚಾಸಾ.1, 3, 14 ಹಾಗೂ 2 ಮತ್ತು 3 ನೇ ಆರೋಪಿತರು ಸೇರಿ, ಆರೋಪಿತರು ತೋರಿಸಿದ ಶಾಂತವೇರಿ ಗ್ರಾಮದ ಈಚಲು ಕಟ್ಟೆಯ ಬಲಭಾಗದ ಗಂಗೂರು ಮೀಸಲು ಅರಣ್ಯಕ್ಕೆ ಹೋದೆವು, ಅಲ್ಲಿ ಮೂರು ಶ್ರೀಗಂಧದ ಮರಕಡಿದ ನಿಶಾನೆಗಳನ್ನು 2 ಮತ್ತು 3 ನೇ ಆರೋಪಿತರು ತೋರಿಸಿದರು, ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿದೆವು. ಸ್ಥಳದಲ್ಲಿ ಸುಮಾರು ಅರ್ದ ಪುಟದಷ್ಟು ಕಡಿದ ಮರದ ಬುಡ ಇರುವುದು ಕಂಡುಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

34. ಸ್ಥಳದಲ್ಲಿ ಮಹಜರನ್ನು ಮದ್ಯಾಹ್ನ 2.30 ರಿಂದ 3.30 ರವರೆಗೆ ಮಾಡಿದೆವು, ಸದರಿ ಮರವನ್ನು ಗರಗಸ ಮತ್ತು ಕತ್ತಿಯಿಂದ ಕತ್ತರಿಸಿರುವುದಾಗಿ 2 ಮತ್ತು 3 ನೇ ಆರೋಪಿತರು ತಿಳಿಸಿದರು, ಶ್ರೀಗಂಧದ

ಕಡಿದ ಮರದ ಬುಡ ಇರುವ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಪೊದೆಯಲ್ಲಿ ಬಚ್ಚಿಟ್ಟಿದ್ದ ಕತ್ತಿ ಮತ್ತು ಗರಗಸಗಳನ್ನು ಆರೋಪಿತರು ತೋರಿಸಿದ ಹಾಜರುಪಡಿಸಿದಂತೆ ಅಮಾನತು ಪಡಿಸಿಕೊಂಡೆವು, ಅವುಗಳ ಮೇಲೆ ಎಫ್.ಒ.ಸಿ. ನಂಬರು ನಮೂದಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35. ಈ ಬಗ್ಗೆ ಸ್ಥಳದಲ್ಲಿ ಅಮಾನತು ವರದಿ ತಯಾರಿಸಿದೆವು ಮತ್ತು ನಂತರ 2 ಮತ್ತು 3 ನೇ ಆರೋಪಿತರನ್ನು ವಾಪಾಸ್ಸು ಕಚೇರಿಗೆ ಕರೆತಂದೆವು. ಈ ಬಗ್ಗೆ ದಿಃ 10.01.2017 ರಂದು ತನಿಖಾಧಿಕಾರಿಗಳಲ್ಲಿ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಕೆ.ಎಸ್.ಎಸ್.ಪಿ. ವಕೀಲರಿಂದ **3** ನೇ ಆರೋಪಿ ಪರವಾಗಿಃ</u>

36.1 ನೇ ಆರೋಪಿತರ ವಕೀಲರ ಪಾಟೀ ಸವಾಲನ್ನೆ ಅಳವಡಿಸಿದ್ದಾರೆ.

<u>ಮುಂದುವರೆದ ಪಾಟೀ ಸವಾಲುಃ</u>

37. ಲಿಂಗದಹಳ್ಳಿ ಪೆಟ್ರೋಲ್ ಬಂಕ್ ನ ಬಳಿ ಕಾಯುತ್ತಿದ್ದಾಗ ಸಾಕಷ್ಟು ವಾಹನಗಳು ಹಾದುಹೋದವು, ಸಾಕಷ್ಟು ಬೈಕುಗಳು ಕೂಡ ಹಾದುಹೋದವು. ನಾವು ರಸ್ತೆಗೆ ಬ್ಯಾರಿಕೇಡ್ ಹಾಕಿರಲಿಲ್ಲ. ನಾವು ಹಾದುಹೋದ ಬೈಕುಗಳನ್ನು ಪರಿಶೀಲಿಸರಲಿಲ್ಲ. ನಾವು ರಸ್ತೆಯ ಎಡಬದಿ ನಿಂತು ಸೂಚನೆ ನೀಡಿದೆವು. ನನ್ನ ಜೊತೆ ಚಾಸಾ.1 ಮತ್ತು ಚಾಸಾ.3 ಇದ್ದರು. ಆರೋಪಿತರು ಯಾವ ಬೈಕಿನಲ್ಲಿ ಬರುತ್ತಾರೆ ಎಂದು ನಮಗೆ ಮೊದಲೇ ಗೊತ್ತಿತ್ತು. ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡುವಾಗ ನಮಗೆ ಬೈಕಿನ ವಿವರ ಮೊದಲೇ ಮಾಹಿತಿ ಇತ್ತು ಎಂದು ಹೇಳಿಕೆ ನೀಡಿಲ್ಲ.

38. ಸದರಿ ಬೈಕಿನ ವಿರುದ್ಧ ಈ ಪ್ರಕರಣ ದಾಖಲಾಗುವ ಮೊದಲು ಬೇರೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. 2 ಮತ್ತು 3 ನೇ ಆರೋಪಿತರ ವಿರುದ್ಧ ಬೇರೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.

2 ಮತ್ತು 3 ನೇ ಆರೋಪಿತರ ಪರಿಚಯ ನಮಗೆ ಮೊದಲಿನಿಂದಲೂ ಇತ್ತು, ಆದರೆ ಅವರ ಪೋಟೋ ಇರಲಿಲ್ಲ. ನಾನು ಬೀಟ್ ಗಾರ್ಡಾಗಿ ಕೆಲಸ ಮಾಡುವುದರಿಂದ ನನಗೆ ಅವರ ಪರಿಚಯ 2010 ನೇ ಸಾಲಿನಿಂದಲೂ ಇದೆ. 2 ಮತ್ತು 3 ನೇ ಆರೋಪಿತರ ಗ್ರಾಮದಲ್ಲಿ ನಾನು 8 ವರ್ಷಗಳ ಕಾಲ ಬೀಟ್ ಗಾರ್ಡ ಕರ್ತವ್ಯ ಮಾಡಿದ್ದೇನೆ. ಅವರ ಊರಿನಲ್ಲಿ ಸುಮಾರು 40 ಮನೆಗಳಿದ್ದು ಹೆಚ್ಚಿನವರ ಪರಿಚಯ ನನಗಿದೆ.

39. 3 ನೇ ಆರೋಪಿ ಮನೆಯಲ್ಲಿ ಆತನ ತಂದೆ, ತಮ್ಮ ಇದ್ದಾರೆ. 3 ನೇ ಆರೋಪಿಯ ತಮ್ಮನ ಹೆಸರು ಗೊತ್ತಿಲ್ಲ. 2 ನೇ ಆರೋಪಿಯ ಸಹೋದರಿಯರು ಇರಬಹುದು. 3 ನೇ ಆರೋಪಿ ಸದರಿ ಬೈಕು ಚಾಲನೆ ಮಾಡುತ್ತಿದ್ದ. ಸುಮಾರು 50 ಅಡಿ ದೂರದಿಂದ ಬೈಕು ನಿಲ್ಲಿಸುವಂತೆ ಸೂಚನೆ ನೀಡಲಾಗಿತ್ತು. ಬೈಕು ನಿಲ್ಲಿಸದೇ ಹೋದರೂ ಎಂದು ಠಾಣೆಗಾಗಲಿ ವಲಯ ಅರಣ್ಯಾಧಿಕಾರಿ ಕಚೇರಿಗಾಗಲಿ ಮಾಹಿತಿ ನೀಡಿರಲಿಲ್ಲ. ತರೀಕೆರೆ ನಗರ ಪಾರೆಸ್ಟ ಸಿಬ್ಬಂದಿಯಾದ ಬಸವರಾಜ್ ನಾಯಕೋಡಿ ಮತ್ತು ಚಾಸಾ.4 ರವರಿಗೆ ಮಾಹಿತಿ ನೀಡಿದ್ದೇನೆ. ಅವರು ಸ್ಥಳಕ್ಕೆ ಬಂದಿರಲಿಲ್ಲ. ಚಾಸಾ.4 ಹಾಗೂ 7 ರವರ ಮೊಬೈಲ ನಂಬರು ಹೇಳಲಾಗುವುದಿಲ್ಲ. ಬೈಕು ನಿಲ್ಲಿಸದೇಹೋದ ತಕ್ಷಣ ನಾವು ಜೀಪಿನಲ್ಲಿ ಅವರನ್ನು ಬೆನ್ನಟ್ಟಿಹೋಗುವಾಗಲೇ ಚಾಸಾ.4 ಹಾಗೂ 7 ರವರಿಗೆ ಕರೆ ಮಾಡಿದ್ದೆವು.

40. ನಾವು ನಿಂತ ಸ್ಥಳದಿಂದ 1 ನೇ ಆರೋಪಿಯ ಮನೆ ಸುಮಾರು 15 ಕಿಮೀ ದೂರ ಇದೆ. ಎಷ್ಟೆಷ್ಟು ಅಡಿ ಅಂತದಲ್ಲಿ ನಾವು ಬೆನ್ನಟ್ಟಿ ಹೋಗಿದ್ದೆವು ಎಂದು ಹೇಳಲಾಗುವುದಿಲ್ಲ. ಆ ಸಮಯದಲ್ಲಿ ಆ ರಸ್ತೆಯಲ್ಲಿ ಬೇರೆ ಬೈಕುಗಳ ಓಡಾಟ ಇತ್ತು. ತರೀಕೆರೆ ಪಾರೆಸ್ಟ ಸಿಬ್ಬಂದಿಗಳು ನಾವು ಬೆನ್ನಟ್ಟಿದ್ದ ಬೈಕನ್ನು ತಡೆಯಲು ಏಕೆ ಬರಲಿಲ್ಲ ಎಂದು ಕೇಳಿರುವುದಿಲ್ಲ.

41. ಮದ್ಯಾಹ್ನ 1.30 ಗಂಟೆ ಸಮಯಕ್ಕೆ ನಮ್ಮ ಸೂಚನೆ ಧಿಕ್ಕರಿಸಿ ಹೋದಾಗ ಸುಮಾರು 1.45 ಗಂಟೆ ಸಮಯಕ್ಕೆ ನಾವು ಬೈಕು ಮತ್ತು 2

ಮತ್ತು 3 ನೇ ಆರೋಪಿತರನ್ನು ಹಿಡಿದೆವು. 2 ಮತ್ತು 3 ನೇ ಆರೋಪಿತರು ಒಂದನೇ ಆರೋಪಿಯ ಮನೆಗೆ ಯಾವ ಬಾಗಿಲಿನಿಂದ ಒಳಗೆ ಹೋದರು ಎಂದು ನೋಡಿರುವುದಿಲ್ಲ. ಆದರೆ 1 ನೇ ಆರೋಪಿ ಯ ಮನೆಯ ಮುಂಬಾಗಿಲಿನಿಂದ 2 ಮತ್ತು 3 ನೇ ಆರೋಪಿತರು ಹೊರಗೆ ಬರುವಾಗ ನಾವು 1 ನೇ ಆರೋಪಿಯ ಮನೆಯ ಮುಂದೆ ಜೀಪು ನಿಲ್ಲಿಸಿದ್ದೆವು.

42. 1 ನೇ ಆರೋಪಿಯ ಮನೆಯ ಮುಂದಿನ ಬಾಗಿಲು ಮುಚ್ಚಿತ್ತು. 1 ನೇ ಆರೋಪಿಯ ಮನೆಯ ಹಿಂದಿನ ಬಾಗಿಲು ನಾವು ತಳ್ಳಿದ ತಕ್ಷಣ ತೆರೆದುಕೊಂಡಿತು. ನಾವು ಒಳಗಡೆ ಪ್ರವೇಶಿಸಿದಾಗ ಮಧ್ಯಾಹ್ನ 2.00 ಗಂಟೆಯಾಗಿತ್ತು. 2 ಮತ್ತು 3 ನೇ ಆರೋಪಿತರು ಮುಂದಿನ ಬಾಗಿಲಿನಿಂದ ಹೊರಗಡೆ ಬಂದ 15 ನಿಮಿಷದಲ್ಲಿ ನಾವು 1 ನೇ ಆರೋಪಿಯ ಮನೆಯ ಹಿಂದಿನ ಬಾಗಿಲಿನಿಂದ ಒಳಗಡೆ ಪ್ರವೇಶಿಸಿದೆವು.

43. ಅಲ್ಲಿಯವರೆಗೂ ನಾವು 1 ನೇ ಆರೋಪಿಯ ಮನೆಯ ಮುಂದಿನ ಬಾಗಿಲ ಬಳಿ ಇದ್ದೆವು. ಚಾಸಾ.6 ರವರು ಸರ್ಚ ವಾರೆಂಟನ್ನು ಸ್ಥಳಕ್ಕೆ ತಂದಾಗ ಮಧ್ಯಾಹ್ನ 2.00 ಗಂಟೆ ಸಮಯವಾಗಿತ್ತು. ಸರ್ಚ ವಾರೆಂಟ್ ತರುವಂತೆ ಪ್ರಾಸಾ.1 ರವರು ಮಾಹಿತಿ ನೀಡಿರಬಹುದು. ಸರ್ಚ ವಾರೆಂಟ್ ತರುವಂತೆ ಪ್ರಾಸಾ.1 ರವರು ನಾವು 1 ನೇ ಆರೋಪಿ ಮನೆ ಇದ್ದಾಗಲೇ ತಿಳಿಸಿರಬಹುದು. 1 ನೇ ಆರೋಪಿಯ ಮನೆಯ ಡೋರ್ ನಂಬರು, ವಿದ್ಯುತ್ ಮೀಟರ ನಂಬರು, ಖಾತಾ ನಂಬರು ಗೊತ್ತಿಲ್ಲ. ಮನೆಯ ಮಾಹಿತಿ ಹೇಗೆ ಸಂಗ್ರಹಿಸಿದರು ಎಂದು ಗೊತ್ತಿಲ್ಲ.

44. ಅಕ್ಕಪಕ್ಕದ ಮನೆಯವರಿಗೆ ಪಂಚನಾಮೇಗೆ ಸಹಕರಿಸುವಂತೆ ನೋಟೀಸು ನೀಡಿರಲಿಲ್ಲ. ಪಂಚನಾಮೆಗೆ ಸಹಕರಿಸದ ಸ್ಥಳೀಕರ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ. ನಿಪಿ.2 ರ ಮಹಜರಿಗೆ ಚಾಸಾ.14 ರವರು ಸಹಿ ಮಾಡಿಲ್ಲ. ಚಾಸಾ.1 ರವರು ಸ್ಟುಡಿಯೋದವರನ್ನು ಕರೆ ಮಾಡಿ ಕರೆಸಿದ್ದರು. ಸ್ಟುಡಿಯೋದವರು ಬಂದಾಗ ಮಧ್ಯಾಹ್ನ 2.30 ಗಂಟೆ ಯಾಗಿತ್ತು. ಸ್ಟುಡಿಯೋ ದವರು ಮಹಜರಿಗೆ ಸಹಿ ಮಾಡಿಲ್ಲ. 1 ನೇ

ಆರೋಪಿ ಮನೆ ಪ್ರವೇಶಿಸುವ ಮೊದಲು ನಾವು ಅಂಗಶೋದನೆ ಮಾಡಿರಲಿಲ್ಲ.

45. 1 ನೇ ಆರೋಪಿ ಮನೆಯ ವಿಸ್ತೀರ್ಣ ಮತ್ತು ಮನೆಯ ಯಾವ ಭಾಗದಲ್ಲ ಯಾವ ವಸ್ತುಗಳು ಇದ್ದವು ಎಂದು ಪರಿಶೀಲಿಸಲು, ದಾಳಿ ನಡೆಯುವ ಮೊದಲು ನಾನು 1 ನೇ ಆರೋಪಿಯ ಮನೆಗೆ ಬೇಟಿ ನೀಡಿಲ್ಲ. ಮೊದಲು ಚಾಸಾ.1 ರವರು 1 ನೇ ಆರೋಪಿ ಮನೆಗೆ ಪ್ರವೇಶಿಸಿದರು. ಬೈಕಿನಲ್ಲಿದ್ದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಬೈಕಿನಿಂದ 1 ನೇ ಆರೋಪಿ ಮನೆಯ ಒಳಗಡೆ ಒಯ್ದ ವಸ್ತು ಯಾವುದು ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

46. ಮು.ಮಾ.1 ರಿಂದ 4 ರ ಪೈಕಿ ಮೊದಲು ಮು.ಮಾ.1 ರ ತುಂಡುಗಳನ್ನು ಅಳತೆ ಮಾಡಿದೆವು. ಮು.ಮಾ.1 ರ ತುಂಡುಗಳ ಸುಮಾರು 15 ವರ್ಷ ಹಳೆಯ ಮರದ ತುಂಡುಗಳಾಗಿರಬಹುದು. ಯಾವ ತುಂಡುಗಳನ್ನು ಮೊದಲು ತೂಕ ಮಾಡಿದೆವು ಎಂದು ಹೇಳಲಾಗುವುದಿಲ್ಲ. ಮು.ಮಾ.1 ಗಂಧದ ತುಂಡುಗಳ ಅಳತೆ ಹೇಳಲಾಗುವುದಿಲ್ಲ.

47. ಮು.ಮಾ.1 ರಲ್ಲಿಯ ತುಂಡುಗಳಲ್ಲಿ ಈಗ ಗಂಧದ ಪರಿಮಳ ಇಲ್ಲ ಎಂದರೆ ನಿಜ. ಗಂಧದ ಕಟ್ಟಿಗೆಯನ್ನು ಗುರುತಿಸಲು ನನಗೆ ತರಬೇತಿ ನೀಡಲಾಗಿದೆ. ಬಲಿತ ಗಂಧದ ಮರ ಸುವಾಸನೆ ಕಳೆದುಕೊಳ್ಳುವದಿಲ್ಲ ಎಂದರೆ ನಿಜ. 7 ರಿಂದ 9 ವರ್ಷ ಹಳೆಯ ಮರದಲ್ಲಿ ತಕ್ಕ ಮಟ್ಟಿಗೆ ಸುವಾಸನೆ ಇರುತ್ತದೆ.

48. ಮು.ಮಾ.2 ರ ಚಿಪ್ಪುಹಂದಿಯ ಚಿಪ್ಪುಗಳ ಮೂಲ ಯಾವುದು ಎಂದು ನನಗೆ ಗೊತಿಲ್ಲ. ಚಿಪ್ಪುಗಳಿಗೆ ಪ್ರತ್ಯೇಕ ನಂಬರು ನೀಡಿಲ್ಲ. ಮು.ಮಾ.2 ಚಿಪ್ಪುಗಳು ಎಷ್ಟು ವರ್ಷ ಹೆಳಯದು ನನಗೆ ಹೇಳಲಾಗುವುದಿಲ್ಲ. ಪ್ರತಿಯೊಂದು ಚಿಪ್ಪುಗಳನ್ನು ತೂಕ ಮಾಡಿಲ್ಲ, ಒಟ್ಟು ಚಿಪ್ಪುಗಳು ಎಷ್ಟು ಎಂದು ಎಣಿಸಿಲ್ಲ. ಮು.ಮಾ.1 ರ ಪುಡಿಯಲ್ಲಿ ಸ್ವಲ್ಪ ಸುವಾಸನೆ ಇದೆ. ಮು.ಮಾ.1 ರ ಪುಡಿಯ ಮೂಲ ತೋಧಿಸಿಲ್ಲ.

ಮು.ಮಾ.1 ರ ಚಕ್ಕೆಯಲ್ಲಿ ಸುವಾನೆ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ಯಾವ ಪ್ರದೇಶದಿಂದ ಸಂಗ್ರಹಿಸಲಾಗಿದೆ ಎಂದು ವಿಚಾರಣೆ ನಡೆಸಿಲ್ಲ.

49. ಪ್ರತಿಯೊಂದು ತುಂಡು ಮತ್ತು ಚಕ್ಕೆಗಳ ಪ್ರತ್ಯೇಕ ತೂಕ ಮಾಡಿಲ್ಲ. ಒಟ್ಟು ತುಂಡುಗಳ ಹಾಗೂ ಚಕ್ಕೆಗಳ ಸಂಖ್ಯೆ ಹೇಳಲಾಗುವುದಿಲ್ಲ. 2 ಮತ್ತು 3 ನೇ ಆರೋಪಿತರನ್ನು ಬೆನ್ನಟ್ಟಿಹೋಗಿ 1 ನೇ ಆರೋಪಿ ಮನೆಯಲ್ಲ ಮು.ಮಾ.1 ರಿಂದ 4 ನ್ನು ಮಹಜರು ಮಾಡಿ ಅಮಾನತುಪಡಿಸಿಕೊಳ್ಳಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

50. 2 ಮತ್ತು 3 ನೇ ಆರೋಪಿತರಿಗೆ ಪೆಟ್ರೋಲ್ ಬಂಕ್ ಹತ್ತಿರ ಬೈಕು ನಿಲ್ಲಿಸಲು ನೀಡಿದ ಸೂಚನೆಯನ್ನು ದಿಕ್ಕರಿಸಿ ನಾವು ಆರೋಪಿತರ ಬೈಕನ್ನು ಬೆನ್ನಟ್ಟಿ ಮುಂದೆ ಹೋಗಿ ನಾವು ಆರೋಪಿತರನ್ನು ಹಿಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಕಿನ ಇಂಜಿನ್ ನಂಬರು ಮತ್ತು ಮಾಡೆಲ್ ಗೊತ್ತಿಲ್ಲ.

51. ಈಗ ತೋರಿಸಿದ ಭಾವಚಿತ್ರದಲ್ಲಿ, ಸದರಿ ಭಾವಚಿತ್ರ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ. ಸಾಕ್ಷಿಗೆ ತೋರಿಸಿದ ಭಾವಚಿತ್ರವನ್ನು ನಿಸಿ.1 ಎಂದು ಗುರುತಿಸಲಾಯಿತು. ನಿಪಿ.6 ರಿಂದ 8, 10, 12 ರ ಭಾವಚಿತ್ರಗಳಲ್ಲಿ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ನೆನಪಿಲ್ಲ. ಯಾವ ಸಮಯದಲ್ಲಿ ಸದರಿ ಭಾವಚಿತ್ರ ಸಂಗ್ರಹಿಸಲಾಯಿತು ಗೊತ್ತಿಲ್ಲ. ನಿಪಿ.7 ರಲ್ಲಿ ಚಾಸಾ.9 ರವರು ಕಂಡುಬರುತ್ತಾರೆ. ನಿಪಿ.7 ರ ಭಾವಚಿತ್ರದಲ್ಲಿ ಕಂಡುಬರುವ ಬುಟ್ಟಿ ನ್ಯಾಯಾಲಯದ ಮುಂದೆ ಇಲ್ಲ. 1 ನೇ ಆರೋಪಿಯ ಬಾಬ್ತು ಮನೆಯ ಹೊರನೋಟದ ಭಾವಚಿತ್ರ ಸಂಗ್ರಹಿಸಿಲ್ಲ.

52. ದಾಳಿ ಮಾಡಿದ ಮನೆ 1 ನೇ ಆರೋಪಿಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಕಂಡುಬರುವುದಿಲ್ಲ. ನಿಪಿ.6 ರಿಂದ 8,

10, 12 ರ ಭಾವಚಿತ್ರಗಳಲ್ಲಿ 1 ನೇ ಆರೋಪಿ ಇರುವುದು ಕಂಡುಬರುವುದಿಲ್ಲ. ಪ್ರವವ ದಾಖಲಾದ ಸಮಯ ನನಗೆ ಹೇಳಲಾಗುವುದಿಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರನ್ನು ಪಂಚನಾಮೆಗೆ ಕರೆದುಕೊಂಡು ಹೋದ ಸ್ಥಳದ ಲ್ಯಾಂಡ್ ಮಾರ್ಕ ಜಿ.ಪಿ.ಎಸ್. ನಲ್ಲಿ ಕಂಡುಬರುತ್ತದೆ. ತರೀಕೆರೆ ಚಿಕ್ಕಮಗಳೂರು ರಸ್ತೆಯ ಬಲಭಾಗದಲ್ಲಿ ಇರುವ ಗಂಗೂರು ಮೀಸಲು ಅರಣ್ಯದ ಈಚಲ ಕಟ್ಟೆ ಎಂಬಲ್ಲಿ 2 ಮತ್ತು 3 ನೇ ಆರೋಪಿ ತರನ್ನು ಕರೆದುಕೊಂಡು ಹೋಗಲಾಗಿತ್ತು.

53. ಮೊದಲು ಬುಡ ಮಹಜರು ಕ್ರಮ ಜರುಗಿಸಿದೆವು. ಮು.ಮಾ.2 ಮತ್ತು 3 ರ ಬುಡ ಮಹಜರು ಮಾಡಿದ ಸ್ಥಳದಿಂದ 20 ರಿಂದ 30 ಅಡಿ ದೂರದಲ್ಲಿತ್ತು. ಬುಡ ಮಹಜರು ಜರುಗಿಸಿ ಭಾವಚಿತ್ರ ಸಂಗ್ರಹಿಸಿದ ನಂತರ ಮದ್ದೆಮಾಲು ನಂ.3 ಮತ್ತು 4 ನ್ನು ಅಮಾನತುಪಡಿಸಿಕೊಳ್ಳಲಾಯಿತು.

54. ನಿಪಿ.10 ರಲ್ಲಿ ಕತ್ತಿ ಮತ್ತು ಗರಗಸದ ಭಾವಚಿತ್ರ ಕಂಡುಬರುತ್ತದೆ. ಮು.ಮಾ.3 ಮತ್ತು 4 ರ ಅಳತೆ ಹೇಲಾಗುವುದಿಲ್ಲ. ಮು.ಮಾ.4 ರಿಂದ ಮರ ಕೊಯ್ದಲ್ಲಿ ನುಣುಪು ಬರುವುದಿಲ್ಲ ಎಂದರೆ ಸರಿಯಲ್ಲ. ಮಹಜರು ಕಾಲದಲ್ಲಿ ಸ್ವತಂತ್ರ ಪಂಚರನ್ನು ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ಪಂಚನಾಮೆಗೆ ನಮ್ಮ ಇಲಾಖಾ ಜೀಪಿನಲ್ಲಿ ಹೋಗಿದ್ದು ಜೀಪು ನಂಬರನ್ನು ಮಹಜರಿನಲ್ಲ ನಮೂದಿಸಿಲ್ಲ. ಬುಡ ಮಹಜರು ಹಾಗೂ ಮು.ಮಾ.3 ಮತ್ತು 4 ನ್ನು ಅಮಾನತುಪಡಿಸಿಕೊಂಡು ಮಹಜರು ಕ್ರಮ ಜರುಗಿಸಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ವಿರುದ್ಧ ದುರುದ್ದೇಶದಿಂದ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ ಶ್ರೀ.ಐ.ಎಸ್.ಟಿ., ವಕೀಲರಿಂದ **4** ನೇ ಆರೋಪಿ ಪರವಾಗಿಃ</u>

55. ಕೋಡಿಕ್ಯಾಂಪಿನಲ್ಲಿ ನಾನು 1 ಮತ್ತು 4 ನೇ ಆರೋಪಿತರನ್ನು ನೋಡಿರಲಿಲ್ಲ. ನಾವು ದಾಳಿ ಮಾಡಿದ ಮನೆ 1 ಮತ್ತು 4 ನೇ ಆರೋಪಿತರಿಗೆ ಸೇರಿದ್ದು ಎಂದು ಅಕ್ಕಪಕ್ಕದವರನ್ನು ಕೇಳಿ ಮತ್ತು ದಸ್ತಗಿರಿಯಾದ ಆರೋಪಿತರನ್ನು ಕೇಳಿ ತಿಳಿದುಕೊಂಡೆವು. ಸರ್ಚ ವಾರೆಂಟ್‌ನ್ನು ಯಾವ ಮನೆಯನ್ನು ಸರ್ಚ ಮಾಡಲು ನೀಡಲಾಗಿದೆ ಎಂದು ಹೇಳಲಾಗುವುದಿಲ್ಲ. ಸರ್ಚೆ ವಾರೆಂಟಿನಲ್ಲಿ ನನ್ನ ಸಹಿ ಇಲ್ಲ. ಸರ್ಚ ವಾರೆಂಟ್ ನೀಡುವಂತೆ ನಾನು ಲಿಖಿತ ಮನವಿ ಸಲ್ಲಿಸಲಿಲ್ಲ. ನಾನು ಪೋನು ಮಾಡಿದ ಸುಮಾರು 20 ನಿಮಿಷದಲ್ಲಿ ಸರ್ಚ ವಾರೆಂಟ್ ಸ್ಥಳಕ್ಕೆ ಬಂದಿತ್ತು. ನಾನು ಅಲ್ಲಿ ನಿಂತಷ್ಟು ಸಮಯವೂ ಸರ್ವ ಮಾಡಿದ ಮನೆಗೆ ಬೀಗ ಹಾಕಿತ್ತು.

56. ಸರ್ಚ ವಾರೆಂಟನ್ನು ಮನೆಯಲ್ಲಿ ಇರುವವರಿಗೆ ತೋರಿಸಿ ಜಾರಿಗೊಳಿಸಬೇಕು ಎಂದು ಗೊತ್ತು. ಯಾರು ಇಲ್ಲದ ಮನೆಗೆ ಪ್ರವೇಶ ಮಾಡಿ ಸರ್ಚ ಮಾಡತಕ್ಕದ್ದು ಎಂದು ನನಗೆ ಆದೇಶ ಇರಲಿಲ್ಲ. ನಾವು ಮನೆಯ ಒಳಗೆ ಪ್ರವೇಶ ಮಾಡಿ ಮುದ್ದೆಮಾಲುಗಳನ್ನು ಅಮಾನತುಪಡಿಸಿ ಕೊಳ್ಳುವವರೆಗೂ ಆ ಮನೆಗೆ ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಪ್ರವೇಶ ಮಾಡಿರಲಿಲ್ಲ.

57. ನಾನು ತನಿಖಾಧಿಕಾರಿಗಳ ಮುಂದೆ 1 ಮತ್ತು 4 ನೇ ಆರೋಪಿತರು ಮನೆಗೆ ಬೀಗ ಹಾಕಿ ಓಡಿಹೋಗಿರುತ್ತಾರೆಂದು ಹೇಳಿಕೆ ನೀಡಿರುವುದಿಲ್ಲ. ನಾನು ತನಿಖೆಯನ್ನು ಮುಂದಿನ ಅಧಿಕಾರಿಗೆ ಹಸ್ತಾಂತರಿಸುವವರೆಗೂ ಮನೆಗೆ ಸಂಬಂಧಿಸಿದ ದಾಖಲೆ ನೋಡಿರುವುದಿಲ್ಲ. 1 ಮತ್ತು 4 ನೇ ಆರೋಪಿತರಿಗೆ ಸಂಬಂಧಿಸಿದ ವಸ್ತುಗಳನ್ನು ದಾಳಿ ಮಾಡಿದ ಮನೆಯಲ್ಲಿಯೇ ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ತನಿಖೆಯನ್ನು ಈ ಪ್ರಕರಣದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 4 ನೇ ಆರೋಪಿಗೂ ಮುದ್ದೆಮಾಲುಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಉಳಿದಂತೆ **1** ಮತ್ತು **3** ನೇ ಆರೋಪಿ ಪರ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ